with the Chief Justice of the High Court of Karnataka, the President of the Karnataka Bar Association and also the Law Commission to amend the procedural laws in the country.

ಅವೆಲ್ಲಾ ಲಾರ್ಡ್ ಮೆಖಾಲೆ ಕಾಲದ್ದು. ಬ್ರಿಟೀಷರ ಕಾಲದ ಪ್ರೊಸೀಜರ್ ಅನ್ನು ನಾವು. ಮಾಡುತ್ತಿದ್ದೇವೆ. ಇಷ್ಟನ್ನೂ ಗಮನ ಹರಿಸಿದರೆ ಆಗುತ್ತದೆ ಇಲ್ಲದಿದ್ದರೆ ಆಗುವುದಿಲ್ಲ;

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಮಾನ್ಯ ಸದಸ್ಯರು ಹೇಳಿರತಕ್ಕಂಥ ಸಲಹೆಗಳು ಸೂಕ್ತವಾಗಿವೆ ಈಗಾಗಲೇ ಲಾ ಕಮಿಷನ್ 5 ರಿಪೋರ್ಟ್‌ಗಳನ್ನು ಕೊಟ್ಟಿದ್ದಾರೆ. ಹೇಗೆ ತಿದ್ದುಪಡಿ ಮಾಡಿಕೊಳ್ಳಬೇಕು ಪ್ರೊಸೀಜರ್ ಅನ್ನು ಎಂದು. ಅದೂ ಅಲ್ಲದೆ ಜಸ್ಟೀಸ್ ಮಳೀಮಠ ಅವರ ಅಧ್ಯಕ್ಷತೆಯಲ್ಲಿ ವಿಶೇಷವಾಗಿ ಇಡೀ ವಿಷಯವನ್ನು ಚರ್ಚೆಮಾಡಿ ಸಲಹೆ ಮಾಡುವುದಕ್ಕೆ ಒಂದು ಕಮಿಷನ್ ಆಗಿ, ಆ ಕಮಿಷನ್ ರಿಪೋರ್ಟ್ ಕೂಡ ಈಗ ಬಂದಿದೆ. ಅದೆಲ್ಲವನ್ನೂ ಗಣನೆಗೆ ತೆಗೆದಕೊಂಡು ತಾವು ಹೇಳಿದ ಹಾಗೆ ಪ್ರೊಸೀಜರ್ ಲಾ ನಲ್ಲಿ ಏನು ಬದಲಾವಣೆ ಮಾಡಬೇಕೆನ್ನುವುದನ್ನು ಚಿಂತನೆ ಮಾಡೋಣ.

ಹುಲಿವಾನ ಹಾಗೂ ತುಂಬಿಕೆರೆ ಹತ್ತಿರ ಮದ್ದೂರು ನಾಲೆಯಲ್ಲಿ ಕಿರು ಜಲವಿದ್ಯುಚ್ಛಕ್ತಿ ಯೋಜನೆ

2188: ಶ್ರೀ ಎಂ.ಎಸ್. ಆತ್ಮಾನಂದ, (ಮಂಡ್ಯ) ಶ್ರೀ ಎನ್. ತಮ್ಮಣ್ಣ (ಕೆರೆಗೋಡ್):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕೆರಗೋಡು ಹೋಬಳಿಯ ಹುಲಿವಾನ ಹಾಗೂ ತುಂಬಿಕೆರೆ ಹತ್ತಿರ ಮದ್ದೂರು ಯೋಜನೆ ತೆಗೆದುಕೊಳ್ಳಬೇಕೆಂದು ಸರ್ಕಾರದ ಗಮನದಲ್ಲಿದೆಯೇ;

ಆ. ಹಾಗಾದರೆ ಈ ಕೆಲಸವನ್ನು ಯಾವಾಗ ಪ್ರಾರಂಭಿಸುತ್ತೀರಿ;

ಇ. ದ್ಯಾಪಸಂದ್ರದ ಹತ್ತಿರ ನಿರ್ಮಿಸಿರುವ ಕಿರು ಜಲವಿದ್ಯುಚ್ಛಕ್ತಿ ಯೋಜನೆ ಈಗ ಯಾವ ಹಂತದಲ್ಲಿದೆ;

ಈ. ಈ ಕಿರುಜಲವಿದ್ಯುಚ್ಛಕ್ತಿ ಯೋಜನೆಯ ಉತ್ಪಾದನಾ ಸಾಮರ್ಥ್ಯ ಎಷ್ಟು ? ಹಾಗೂ ಯಾವಾಗ ಪ್ರಾರಂಭಿಸುತ್ತೀರಿ ?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ. ಹೌದು.

ಆ. ಖಾಸಗಿ ಸಂಸ್ಥೆಗಳು ಸಧ್ಯದಲ್ಲಿಯೇ ಕೆಲಸಗಳನ್ನು ಪ್ರಾರಂಭಿಸುವರು.

ಇ. ಸರ್ಕರದ ಆದೇಶ ಸಂಖ್ಯೆ ಪಿಡಬ್ಲೂಡಿ 182 ಪಿಪಿಸಿ 85 ದಿನಾಂಕ 4-3-1986ರಲ್ಲಿ ದ್ಯಾಪಸಂದ್ರದ ಹತ್ತಿರ ಶಿವಾ ಕಿರುಜಲವಿದ್ಯುತ್ ಯೋಜನೆಯನ್ನು ಕಾವೇರಿ ಹೈ ಡ್ರೋ ಎನರ್ಜಿ ಲಿಮಿಟೆಡ್‌ರವರಿಗೆ ಕ್ಯಾಪ್ಟಿವ್ ವಿದ್ಯುತ್ತನ್ನು ಉತ್ಪಾದಿಸಲು ವಹಿಸಲಾಗಿದೆ. ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಸಂಸ್ಥೆ ಯೋಜನೆ ಸೆಪ್ಟೆಂಬರ್ 1992ರಲ್ಲಿ ಒಪ್ಪಂದಕ್ಕೆ ಬರಲಾಗಿದೆ.

ಈ. 3 ಮೆ. ವ್ಯಾಟ್. ಯೋಜನಾ ಕೆಲಸಗಳನ್ನು ಪ್ರಾರಂಭಿಸಲು ಎಲ್ಲಾ ವ್ಯವಸ್ಥೆಗಳನ್ನು ಸಂಸ್ಥೆಯು ಮಾಡುತ್ತಾ ಇದೆ.

ಶ್ರೀ ಎಂ.ಎಸ್. ಆತ್ಮಾನಂದ:– ಸನ್ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ, 86ನೇ ಇಸವಿಯಲ್ಲಿ ದ್ಯಾಪಸಂದ್ರ ಹತ್ತಿರ ಇರತಕ್ಕಂಥ ಕಿರು ಜಲವಿದ್ಯುತ್ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ ಆ ಸಂಸ್ಥೆಗೆ ಕಾವೇರಿ ಹೈಡ್ರೋ ಎನರ್ಜಿ ಲಿಮಿಟೆಡ್ ಅವರಿಗೆ 92 ರಲ್ಲಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ಸಮಯ ನಿಗದಿ ಮಾಡಲಾಗಿತ್ತು. ಈಗಾಗಲೇ ನಾವು 93ನೇ ಇಸವಿಯ 3ನೇ ತಿಂಗಳಲ್ಲಿ ಇದ್ದೇವೆ. ಈ ಯೋಜನೆ ಏಕೆ ಇಷ್ಟು ತಡವಾಯಿತು ? ಇದನ್ನು ಶೀಘ್ರ ಅನುಷ್ಠಾನ ಮಾಡಲು ಶ್ರಮ ಕೈಗೊಳ್ಳುತ್ತೀರಾ ? ಅಂತೆಯೇ ಹುಲಿವಾನ ಮತ್ತು ತುಂಬಿಕೆರೆ ಹತ್ತಿರ ಇರುವ ಮದ್ದೂರು ಯೋಜನೆಗೆ ಖಾಸಗಿ ಸಂಸ್ಥೆಯವರಿಗೆ ವಹಿಸಲಾಗಿದೆ ಎಂದು ಹೇಳಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಕೃಷಿ ಆಧಾರಿತ ಕೈಗಾರಿಕೆಗಳಿದ್ದು, ನಮಗೆ ಬಹಳ ವಿದ್ಯುಚ್ಛಕ್ತಿ ಕೊರತೆಯನ್ನು ಅನುಭವಿಸುತ್ತಿರುವುದರಿಂದ ಇನ್ನೂ 8-10 ಮಿನಿ ಯೋಜನೆಗಳನ್ನು ಮಾಡಲು ಗುರುತಿಸಲಾಗಿದೆ. ವಿಶ್ವೇಶ್ವರಯ್ಯ ನಾಲೆ 300 ದಿವಸ ನಮ್ಮಲ್ಲಿ ಹರಿಯುವುದರಿಂದ ಈ ಯೋಜನೆಗಳನ್ನು ಮಾಡುವುದಕ್ಕೆ ಅಂದಾಜು ತಯ್ಯಾರು ಮಾಡಿದ್ದಾರೆ. ಈ ಯೋಜನೆಗಳ ಬಗ್ಗೆ ಯಾವಾಗ ಕ್ರಮ ಕೈಗೊಳ್ಳುತ್ತಾರೆಂದು ನಾನು ಕೇಳಬಯಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:– ಮಾನ್ಯ ಅಧ್ಯಕ್ಷರೇ, ಮದ್ದೂರು ಕಿರುಜಲ ವಿದ್ಯುತ್ ಯೋಜನೆಯನ್ನು ಎಲ್.ಕೆ ಪವರ್ ಕಾರ್ಪೊರೇಷನ್‌ನವರಿಗೆ ಕ್ಯಾಪ್ಟಿವ್ ವಿದ್ಯುತ್ ಉತ್ಪಾದನೆ ಮಾಡುವುದಕ್ಕೋಸ್ಕರ 1990ನೇ ಇಸವಿಯಲ್ಲಿ ಗುತ್ತಿಗೆ ನೀಡಿದೆ. ಆದರೆ ಅವರು ಇನ್ನೂ ಯೋಜನಾ ಕೆಲಸಗಳನ್ನು ಪ್ರಾರಂಭಿಸಬೇಕಾಗಿದೆ.

ಕೀಲಾರ ಜಲವಿದ್ಯುತ್ ಯೋಜನೆಯನ್ನು 1992ರಲ್ಲಿ ಎಲೆಕ್ಟ್ರಾನಿಕ್ ಟೆಕ್ನಾಲಾಜಿ ಕಂಪನಿ (ಪ್ರೈವೇಟ್) ಲಿಮಿಟೆಡ್ ಇವರಿಗೆ ಗುತ್ತಿಗೆಯನ್ನು ನೀಡಿದೆ. ಅವರೂ ಯೋಜನಾ ಕೆಲಸವನ್ನು ಪ್ರಾರಂಭಿಸಬೇಕಾಗಿದೆ. ದ್ಯಾಪಸಂದ್ರದ ಶಿವ ಕಿರತ್ ಜಲವಿದ್ಯುತ್ ಯೋಜನೆ ಕಾವೇರಿ ಹೈಡ್ರೋ ಎನರ್ಜಿ ಲಿಮಿಟೆಡ್‌ರವರಿಗೆ ಒಂದು ಕ್ಯಾಪ್ಟಿವ್ ವಿದ್ಯುತ್ತನ್ನು ಉತ್ಪಾದಿಸಲು ವಹಿಸಲಾಗದೆ. ಇದು 1992ನೇ ಇಸವಿಯಲ್ಲಿ ಇವರ ಜೊತೆಯಲ್ಲಿ ಒಪ್ಪಂದಕ್ಕೆ ಬರಲಾಗಿದೆ. ಎಲ್ಲಾ ಒಪ್ಪಂದಕ್ಕೆ ಬರಲಾಗಿದೆ. ಯಾರೂ ಕೆಲಸವನ್ನು ಪ್ರಾರಂಭ ಮಾಡಲಿಲ್ಲ; ಅದಕ್ಕೆ ನಾನು ಆಲೋಚನೆ ಮಾಡುತ್ತಿದ್ದೇನೆ. ಯೋಚನೆ ಮಾಡುತ್ತಿದ್ದೇನೆ. ಇವರೆಲ್ಲರಿಗೂ ಒಂದು ಟೈಂ ಲಿಮಿಟ್ ಕೊಟ್ಟು ಇಂತಿಷ್ಟು ದಿನಗಳಲ್ಲಿ ಅಥವಾ ಇಂತಿಷ್ಟು ತಿಂಗಳಲ್ಲಿ ಅವರು ಈ ವಿದ್ಯುತ್ ಉತ್ಪಾದನಾ ಕೆಲಸ ಕಾರ್ಯಗಳಲ್ಲಿ ಸೀರಿಯಸ್‌ನೆಸ್ ಮತ್ತು ಸಾಕಷ್ಟು ಕೆಲಸವನ್ನು ಮಾಡುತ್ತಿದ್ದೇವೆ ಎನ್ನತಕ್ಕದ್ದನ್ನು ನಮಗೆ ನಂಬಿಕೆ ಬರತಕ್ಕಂಥ ರೀತಿಯಲ್ಲಿ ಅವರು ನಿರ್ವಹಿಸಬೇಕು ಇಲ್ಲದಿದ್ದರೆ ಈ ಒಪ್ಪಂದಗಳನ್ನೆಲ್ಲವನ್ನು ಕೂಡ ನಾವು ರದ್ದು ಮಾಡಿ ಹೊಸದಾಗಿ ಪೇಪರ್‌ಗಳ ಮೂಲಕ ಟೆಂಡರ್‌ಗಳನ್ನು ಕರೆದು ಯಾರಾದರೂ ಖಾಸಗೀ ವಲಯದವರು ವಿದ್ಯುತ್ ಉತ್ಪಾದನೆಯನ್ನು ಮಾಡುವುದಕ್ಕೆ ಮುಂದಕ್ಕೆ ಬಂದರೆ ಅವರಿಗೆ ಕೊಡಬಹುದು ಅಥವಾ ಪವರ್ ಕಾರ್ಪೊರೇಷನ್‌ನವರೇ ಈ ಮೂರು ಸಣ್ಣ ಉತ್ಪಾದನಾ ಕಾಮಗಾರಿಗಳನ್ನು ಮಾಡತಕ್ಕದ್ದು - ಈ ಎರಡೂ ಆಪ್ಷನ್‌ಗಳನ್ನು ಕೂಡ ಸರ್ಕಾರದವರು ಇಟ್ಟುಕೊಂಡಿರುತ್ತಾರೆ.

ಶ್ರೀ ಎಂ.ಎಸ್. ಆತ್ಮಾನಂದ:– ಈ ಮೂರು ಯೋಜನೆಗಳ ಜೊತೆಗೆ ಇನ್ನೂ ಕೂಡ ನಾಲ್ಕು, ಒಟ್ಟು ಏಳು ಯೋಜನೆಗಳನ್ನು - ವಿಶ್ವೇಶರಯ್ಯ ನಾಲಾ ಸಂಕೀರ್ಣ ಪ್ರದೇಶದಲ್ಲಿ ಕಿರುವಿದ್ಯುತ್ ಜಲಘಟಕಗಳನ್ನು ಸ್ಥಾಪಿಸಬಹುದೆಂದು ಗುರುತಿಸಲಾಗಿದೆ. ಈ ಯೋಜನೆಗಳನ್ನು ತಾವು ತೆಗೆದುಕೊಳ್ಳುತ್ತೀರಾ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:– ಅವುಗಳೂ ಕೂಡ ತಾಂತ್ರಿಕವಾಗಿ ಸಾಧ್ಯವಾಗಬಹುದು ಎನ್ನತಕ್ಕಂಥದ್ದು, ನಮಗೆ ಮನದಟ್ಟಾದರೆ ಅವುಗಳ ಬಗ್ಗೆಯೂ ಕೂಡ ಇದೇ ನೀತಿಯನ್ನು ಅನುಸರಿಸುತ್ತೇವೆ.

ಅಧ್ಯಕ್ಷರು:– ಇದರ ಬಗ್ಗೆ ಎರಡು ಉಪಪ್ರಶ್ನೆಗಳನ್ನು ಅವರು ಕೇಳಿದ್ದಾರೆ.

ಶ್ರೀ ಎನ್. ತಮ್ಮಣ್ಣ:– ನಾನೂ ಕೇಳಿದ್ದೇನೆ.

ಅಧ್ಯಕ್ಷರು:– ಇದು ನಿಮ್ಮ ಪ್ರಶ್ನೆ ಅಲ್ಲ. ಇದರಲ್ಲಿ ಆತ್ಮನಂದರವರ ಹೆಸರು ಇದೆ. ಆದರೂ, ಪರವಾಗಿಲ್ಲ ಕೇಳಿ.

ಶ್ರೀ ಎನ್. ತಮ್ಮಣ್ಣ:– ಉಲುವಾಲ ಗ್ರಾಮದ ಹತ್ತಿರ ಒಂದು ಮಿನಿ ಜಲವಿದ್ಯುತ್ ಯೋಜನೆಯನ್ನು ಮಾಡಬೇಕೆಂದು ಸುಮಾರು ಒಂದು ವರ್ಷದಿಂದ ತೀರ್ಮಾನ ಮಾಡಿದ್ದಾರೆ. ಅಲ್ಲಿ ಸುಮಾರು 3 ಎಕರೆ ಜಮೀನನ್ನು ಗುರ್ತಿಸಿ ನಾನು ಮತ್ತು ತಹಶೀಲ್ದಾರರು ರೈತರ ಜೊತೆಯಲ್ಲಿ ನೆಗೋಸಿಯೇಷನ್ ಮಾಡಿ ಒಂದು ವರ್ಷವಾಗಿದೆ. ಒಂದು ಎಕರೆಗೆ ಒಂದು ಲಕ್ಷ ರೂಪಾಯಿ ಅಂತ ನಿಗದಿ ಮಾಡಿದ್ದೇನೆ. ಆದರೆ ಇಲ್ಲಿಯವರೆಗೂ ಪವರ್ ಕಾರ್ಪೊರೇಷನ್‌ನವರಾಗಲಿ ಯಾರೂ ಮುಂದೆ ಬಂದಿಲ್ಲ. ಅಲ್ಲಿ ಏನಾಗಿದೆ ಎಂದರೆ ರೈತರು ಏನು ತಮ್ಮ ಜಮೀನನ್ನು ಕಳೆದುಕೊಳ್ಳುತ್ತಾರಲ್ಲಾ, ಆ ಜಮೀನಿಗೆ ಬೇರೆ ಜಮೀನನ್ನು ತೆಗೆದುಕೊಳ್ಳಬೇಕಾದರೆ ವರ್ಷವರ್ಷಕ್ಕೆ ಜಮೀನಿನ ಬೆಲೆ ಜಾಸ್ತಿಯಾಗುತ್ತದೆ. ಆದ್ದರಿಂದ ಈ ಜಮೀನನ್ನು ಯಾವಾಗ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳುತ್ತಾರೆ ಎಂದು ತಮ್ಮ ಮೂಲಕ ಮಾನ್ಯ ಉಪಮುಖ್ಯಮಂತ್ರಿಗಳನ್ನು ಕೇಳಬಯಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:– ಇವರು ಸ್ಥಳವನ್ನು ಗುರ್ತಿಸಿದ್ದೇವೆಂದು ಮಾನ್ಯ ಸದಸ್ಯರು ನನಗೆ ತಿಳಿಸುತ್ತಿದ್ದಾರೆ. ನಾನು ಅವರಿಗೆ ಮರುಸೂಚನೆಯನ್ನು ಕೊಡುಬಹುದಾದರೆ ಇಂತಹ ಸಣ್ಣ ಘಟಕಗಳನ್ನು ಕೋ–ಆಪರೇಟಿವ್ ಎಫರ್ಟ್ ಸ್ಥಳೀಕರು ತಾವೇ ಮುಂದಾಳುತನವನ್ನು ವಹಿಸಿ ಒಂದು ಕೋ–ಆಪರೇಟಿವ್ ಎಫರ್ಟ್ ಮಾಡಿ ಇಂತಹ ಸಣ್ಣ ಸಣ್ಣ ಜಲ ವಿದ್ಯುತ್ ಉತ್ಪಾದನೆಯನ್ನು ನೀವೇ ಮಾಡಿದರೆ ನಿಮ್ಮ ಕೋ–ಆಪರೇಟಿವ್ ಸೊಸೈಟಿಗೂ ಲಾಭ ಬರುತ್ತವೆ. ಜನಕ್ಕೂ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಅದನ್ನು ಪರಿಶೀಲಿಸಿ ಅಂತ ಹೇಳಿ ಮಾನ್ಯ ಸದಸ್ಯರಿಗೆ ಸೂಚನೆಯನ್ನು ಕೊಡುತ್ತೇನೆ.

ಮುಂಡರಗಿ ತಾಲ್ಲೂಕಿನಲ್ಲಿ ಕೆರೆಗಳ ದುರಸ್ತಿ

2191: ಶ್ರೀ ಕೆ.ಹೆಚ್. ಕುರುಡಗಿ (ಮುಂಡರಗಿ):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮುಂಡರಗಿ ತಾಲ್ಲೂಕಿನಲ್ಲಿ ನೀರಾವರಿ ಕೆರೆಗಳಾದ ಡಂಬಳ, ಆಲೂರ ಮತ್ತು ಜಂಟ್ಲಿ ಶಿಲೋರ್ ಕೆರೆಗಳ ಕಾಲುವೆಗಳ ದುರಸ್ತಿಯಾಗಿಲ್ಲದ್ದರ ಕಾರಣಗಳು ಏನು ? ಮೇಲ್ಕಾಣಿಸಿದ ಕಾಲುವೆಗಳ ದುರಸ್ತಿ ಎಂದಿನಿಂದ ಪ್ರಾರಂಭ ಮಾಡುತ್ತೀರಿ;

ಆ. ಮುಂಡರಗಿ ತಾಲ್ಲೋಕಿನಲ್ಲಿ ಕಕ್ಕೂರ ಹಾಗೂ ಮುರಡಿ ಹೊಸಕೆರೆಗಳನ್ನು ನಿರ್ಮಾಣ ಮಾಡಲಿಕ್ಕೆ ಮನವಿಕೊಟ್ಟಿದ್ದರೂ ಇಲ್ಲಿಯವರೆಗೂ ಸರ್ವೆ ಕಾರ್ಯ ನಡೆದಿಲ್ಲದಿರುವುದಕ್ಕೆ ಕಾರಣಗಳೇನು ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ. ಸದರಿ ಕೆರೆಗಳ ಕಾಲುವೆ ದುರಸ್ತಿ ಕಾರ್ಯವನ್ನು ಈಗಾಗಲೇ ಕೈಗೊಳ್ಳಲಾಗಿದೆ.

ಆ. ಮುಂಡರಗಿ ತಾಲ್ಲೂಕು ಮುರಡಿ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ನಿರ್ಮಿಸಲು ಪೂರ್ವಭಾವಿ ತನಿಖಾ ವರದಿಯನ್ನು ತಯಾರಿಸಲಾಗಿದೆ. ಮತ್ತು 1993-94ನೇ ಸಾಲಿನ